# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

☎:08352-229051 www.kswu.ac.in **Fax**: 08352 -229057

ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–95/2016–17/2408 ದಿನಾಂಕ: 28–12–2016

ಗೆ,
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:19–12–2016 ರಂದು ಮಧ್ಯಾಹ್ನ 11:30ಗಂಟೆಗೆ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣ ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 19–12–2016ರಂದು ಮಧ್ಯಾಹ್ನ 11:30ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ **"2016–17ನೇ ಹಣಕಾಸು ಸಾಲಿನ ಆರನೆಯ ಹಾಗೂ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

**–ಸಹಿ –**

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 14 ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.
3. ಕಛೇರಿ ಪ್ರತಿ.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4–11–2016 | 3–11–2017 |
| 5. | 1(ಇ) | ಡಾ.ಸರಸ್ವತಿ.ಎಸ್ | ಸದಸ್ಯರು | 01–12–2014 | 09–02–2017 |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01–12–2014 | 10–04–2017 |
| 7. | 1(ಎಫ್) | ಶ್ರೀ.ನಾನಾಗೌಡ ಹಿಪ್ಪರಗಿ | ಸದಸ್ಯರು | 02–12–2016 | 01–12–2017 |
| 8. | 1(ಎಫ್) | ಶ್ರೀಮತಿ ಬುಷಿರಾ ಬೇಗಂ | ಸದಸ್ಯರು | 02–12–2016 | 01–12–2017 |
| 9. | 1(ಎಫ್) | ಡಾ. ಬಿರಾದಾರ ಅರವಿಂದಕುಮಾರ | ಸದಸ್ಯರು | 02–12–2016 | 01–12–2017 |
| 10. | 1(ಎಫ್) | ಡಾ. ಹುಮೆರಾ ಸುಲ್ತಾನ | ಸದಸ್ಯರು | 02–12–2016 | 01–12–2017 |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19–02–2015 | 18–02–2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19–02–2015 | 18–02–2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19–02–2015 | 18–02–2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19–02–2015 | 18–02–2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19–02–2015 | 18–02–2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19–02–2015 | 18–02–2018 |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01–06–2016 | 31–05–2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು | -- | -- |
| 22. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14–7–2016 | |
| 23. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18–06–2016 | |

## ದಿನಾಂಕ:19-12-2016 ರಂದು ಬೆಳಿಗ್ಗೆ 11:30ಗಂಟೆಗೆ, ಸಿಂಡಿಕೇಟ್ ಸಭಾಂಗಣ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇಲ್ಲಿ ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ. ಮಲ್ಲೇಶ್ವರಪ್ಪಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಧಾರವಾಡ | : ಸದಸ್ಯರು |
| 3. | ಪ್ರೊ. ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ-ವಿಜ್ಞಾನ ನಿಕಾಯ | : ಸದಸ್ಯರು |
| 4. | ಡಾ.ಸರಸ್ವತಿ ಎಸ್ | : ಸದಸ್ಯರು |
| 5. | ಡಾ.ಶ್ರೀನಿವಾಸ ಬಳ್ಳಿ | : ಸದಸ್ಯರು |
| 6. | ಶ್ರೀ.ನಾನಾಗೌಡ ಹಿಪ್ಪರಗಿ | : ಸದಸ್ಯರು |
| 7. | ಶ್ರೀಮತಿ ಬುಷಿರಾ ಬೇಗಂ | : ಸದಸ್ಯರು |
| 8. | ಡಾ.ಬಿರಾದಾರ ಅರವಿಂದಕುಮಾರ | : ಸದಸ್ಯರು |
| 9. | ಡಾ.ಹುಮೆರಾ ಸುಲ್ತಾನ | : ಸದಸ್ಯರು |
| 10. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 11. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 12. | ಡಾ.ಫರ್‌ಜಾನಾ ಎಂ | : ಸದಸ್ಯರು |
| 13. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 14. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 15. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 16. | ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | : ಸದಸ್ಯರು |
| 17. | ಪ್ರೊ.ಕೆ.ಪಿ.ಶ್ರೀನಾಥ, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 4. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 5. | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 6. | ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | : ಸದಸ್ಯರು |

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ರವರು ಎಲ್ಲ ಸದಸ್ಯರನ್ನು ಸ್ವಾಗತಿಸಿ, ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 28(1)(ಎಫ್)ರನ್ವಯ ನಾಮನಿರ್ದೇಶಿತರಾದ ಪ್ರಾಂಶುಪಾಲರುಗಳಾದ ಶ್ರೀ.ನಾನಾಗೌಡ ಹಿಪ್ಪರಗಿ, ಶ್ರೀಮತಿ ಬುಷಿರಾ ಬೇಗಂ, ಡಾ.ಬಿರಾದಾರ ಅರವಿಂದಕುಮಾರ, ಡಾ.ಹುಮೆರಾ ಸುಲ್ತಾನ ಹಾಗೂ ಪ್ರೊ ಮಲ್ಲೇಶ್ವರಪ್ಪಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಧಾರವಾಡ ಇವರನ್ನು ಸಭಾ ಸದಸ್ಯರುಗಳಿಗೆ ಪರಿಚಯಿಸಿದರು ಹಾಗೂ ಸದಸ್ಯರು ತಮ್ಮ ತಮ್ಮ ಸ್ವ-ಪರಿಚಯ ಮಾಡಿಕೊಟ್ಟ ನಂತರ ಕಾರ್ಯಸೂಚಿಯನ್ನು ಮಂಡಿಸಲು ಕುಲಸಚಿವರಿಗೆ ತಿಳಿಸಿದರು.

**ದಿನಾಂಕ: 02-11-2016 ಹಾಗೂ 11-11-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.**

ದಿನಾಂಕ:2-11-2016ರ ನಡವಳಿಗಳ ಮೇಲೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ.ಶ್ರೀನಿವಾಸ ಬಳ್ಳಿ ಹಾಗೂ ಡಾ.ಸರಸ್ವತಿ.ಎಸ್. ಅವರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ಅವರು ಸ್ವಾಗತಿಸಿ ಅಜೆಂಡಾದಲ್ಲಿರುವ ವಿಷಯಗಳನ್ನು ತೆಗೆದುಕೊಳ್ಳಲು ಕುಲಸಚಿವರಿಗೆ ಆದೇಶಿಸಿದರು. ಡಾ.ಶ್ರೀನಿವಾಸ ಬಳ್ಳಿ ಅವರು ಅಜೆಂಡಾದಲ್ಲಿ ಸೇರಿಸಲು ಕಳಿಸಿದ ಸಂಗತಿಯನ್ನು ಪರಿಗಣಿಸದೇ ಇರುವುದನ್ನು ಮತ್ತು ಅದಕ್ಕೆ ಸೂಕ್ತವಾದ ಕಾರಣಗಳನ್ನು ಕೊಡದೇ ಇರುವುದನ್ನು ದಾಖಲೆ ಸಹಿತ ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ತಂದರು. ಇದೇ ರೀತಿ ಶ್ರೀ ಆರ್.ಬಿ.ಭಾವಕಟ್ಟಿ, ಡಾ.ಸುಜಾತಾ ಜಂಗಮಶೆಟ್ಟಿ ಹಾಗೂ ಸರಸ್ವತಿ ಅವರ ಸೂಚನೆಗಳನ್ನು ಪರಿಗಣಿಸದ್ದಕ್ಕೆ ಮತ್ತು ಅದಕ್ಕೆ ಕುಲಸಚಿವರು ನೀಡಿದ ಉತ್ತರಕ್ಕೆ ತೃಪ್ತರಾಗದೆ ಡಾ.ಶ್ರೀನಿವಾಸ ಬಳ್ಳಿ, ಡಾ.ಸರಸ್ವತಿ.ಎಸ್, ಡಾ.ಸತ್ಯಾನಂದ ಪಾತ್ರೋಟ, ಡಾ.ಫರಜಾನಾ.ಎಂ, ಡಾ.ಸುಜಾತಾ ಜಂಗಮಶೆಟ್ಟಿ ಮತ್ತು ಶ್ರೀ.ಆರ್.ಬಿ.ಭಾವಿಕಟ್ಟಿ ಇಷ್ಟು ಜನ ಸಿಂಡಿಕೇಟ್ ಸದಸ್ಯರು ಸಭಾತ್ಯಾಗ ಮಾಡಿದರು.

ಕೋರಂ ಇಲ್ಲದ ಕಾರಣ ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

*ನಿರ್ಣಯ:-* **ದೃಢೀಕರಿಸಲಾಯಿತು.**

**ದಿನಾಂಕ: 09-09-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.**

*ನಿರ್ಣಯ:-* **ಸಿಂಡಿಕೇಟ್ ಸದಸ್ಯರುಗಳೆಲ್ಲ ಒಪ್ಪಿಗೆ ನೀಡಿದರು. ಹಾಗೂ** ಕೆಲ ಸದಸ್ಯರು **ನಡವಳಿ ಸಂಖ್ಯೆ:16** ಕುರಿತು ಡಾ.ಎ.ಜಿ.ಹೇಮಂತಕುಮಾರ, ಸಹ-ಪ್ರಾಧ್ಯಾಪಕರು ಶಿಕ್ಷಣ ಅಧ್ಯಯನ ವಿಭಾಗ ಇವರ ಮೇಲೆ ಇರುವ ಆರೋಪ ವಿಚಾರಣಾ ಸಮಿತಿಯ ವರದಿ ಮೇಲೆ ತೆಗೆದುಕೊಂಡ ಕ್ರಮದ ಕುರಿತು ಕೇಳಿದರು. **ಅದಕ್ಕೆ ಮಾನ್ಯ ಕುಲಸಚಿವರು ಡಾ.ಎ.ಜಿ.ಹೇಮಂತಕುಮಾರ, ಇವರಿಗೆ ವಿಶ್ವವಿದ್ಯಾಲಯದಲ್ಲಿ ಅಥವಾ ವಿಭಾಗದಲ್ಲಿ ಉನ್ನತ ಜವಾಬ್ದಾರಿಗಳನ್ನು ಕೊಡುವಾಗ ಅವರ ಹಿಂದಿನ ನಡವಳಿಕೆಯನ್ನು ಪರಿಗಣಿಸಬೇಕೆಂದು ಆದೇಶಿಸಲಾಗಿದೆ ಎಂದು ತಿಳಿಸಿದರು.**

***ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಚಾರಗಳು* ವಿಷಯ :1** ವಿಶ್ವವಿದ್ಯಾನಿಲಯದ ಶಿಕ್ಷಕರ ಜೇಷ್ಠತಾ ಪಟ್ಟಿಯ ಕುರಿತಂತೆ ಡಾ.ವೆಂಕೋಬ ನಾರಾಯಣಪ್ಪ ಅವರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು/ಬುಡಕಟ್ಟುಗಳ ಆಯೋಗಕ್ಕೆ ಆಕ್ಷೇಪ ಸಲ್ಲಿಸಿದ್ದು, ಈ ಬಗ್ಗೆ ವಿಶ್ವವಿದ್ಯಾನಿಲಯದ ಸ್ಪಷ್ಟೀಕರಣವನ್ನೂ ನೀಡಲಾಗಿದ್ದು, ಈಗ ಆಯೋಗವು ಬಿ.ಎಡ್ ಮತ್ತು ಎಂ.ಎಡ್ ಕೋರ್ಸಿನ ಜೇಷ್ಠತಾ ಪಟ್ಟಿಯ ಬಗ್ಗೆ ನಿರ್ದೇಶನ ನೀಡಿರುವುದನ್ನು ಸದಸ್ಯರಿಗೆ ಮಾನ್ಯ ಕುಲಪತಿಗಳು ತಿಳಿಸಿದರು.ಆಯೋಗದ ಪತ್ರದ ಪ್ರತಿಯನ್ನು ನೀಡಲು ಸದಸ್ಯರು ಕೋರಿದರು. ಡಾ.ಸತ್ಯಾನಂದ ಪಾತ್ರೋಟ ಅವರ ಅಧ್ಯಕ್ಷತೆಯಲ್ಲಿ ಸಿದ್ಧಪಡಿಸಿದ ಜೇಷ್ಠತಾ ಪಟ್ಟಿಗಳ ಬಗೆಗೂ ಚರ್ಚೆ ನಡೆಯಿತು.(ಆಯೋಗದ ಪತ್ರದ ಪ್ರತಿ ನೀಡಲಾಯಿತು) ***ಇನ್ನು ಮುಂದುವರೆದು ಈ ವಿಷಯವನ್ನು ಕಾನೂನು ಸಲಹೆ ಪಡೆದು ಸಿಂಡಿಕೇಟ್ ಸಭೆಗೆ ತರಲಾಗುವುದು ಎಂದು ತಿಳಿಸಲಾಯಿತು.***

***ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಚಾರಗಳು* ವಿಷಯ :3** ಸಿಂಡಿಕೇಟ್ ಸದಸ್ಯರಾದ ಮಾನ್ಯ ಸುಜಾತಾ ಜಂಗಮಶೆಟ್ಟಿ ಅವರು ವಿಶ್ವವಿದ್ಯಾನಿಲಯದಲ್ಲಿ ಪದವಿ ಮತ್ತು ಸ್ನಾತಕ ಪದವಿ ಪಠ್ಯದಲ್ಲಿ ಮನಃಶಾಸ್ತ್ರವನ್ನು ಐಚ್ಛಿಕ ಪತ್ರಿಕೆಯಾಗಿ ಬೋಧಿಸಲು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಮನಃಶಾಸ್ತ್ರದ ಸಂಘದವರ ಮನವಿಯನ್ನು ಸಭೆಯ ಗಮನಕ್ಕೆ ತಂದರು. ದಿನಾಂಕ:9-9-2016ರಂದು ಜರುಗಿದ ಸಭೆಯಲ್ಲಿ ***"ಮುಂದಿನ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಇಟ್ಟು, ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಬಹುದಾಗಿದೆ ಎಂದು ಸಭೆಯು***

*ನಿರ್ಣಯಿಸಿತು."* ಮುಂದುವರೆದು ಡಾ.ಸುಜಾತಾ ಜಂಗಮಶೆಟ್ಟಿ ಅವರು ಸಭೆಯ ನಿರ್ಣಯದಲ್ಲಿ ಸಹಾನುಭೂತಿಯಿಂದ ಎಂಬ ಪದವನ್ನು ತೆಗೆದುಹಾಕಲು ತಿಳಿಸಿದರು. ಅದಕ್ಕೆ ಎಲ್ಲ ಸದಸ್ಯರು ಒಪ್ಪಿದರು

*ನಿರ್ಣಯ:–*

*ಮುಂದಿನ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಇಟ್ಟು, ಮನವಿಯನ್ನು ಪರಿಶೀಲಿಸಬಹುದಾಗಿದೆ ಎಂದು ಸಭೆಯು ನಿರ್ಣಯಿಸಿತು."*

**ದಿನಾಂಕ:11–11–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು**

ಸಿಂಡಿಕೇಟ್ ಸದಸ್ಯರಾದ ಮಾನ್ಯ ಶ್ರೀನಿವಾಸ ಬಳ್ಳಿ ಅವರು ದಿನಾಂಕ:9–9–2016ರ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿ ಪುರವಣಿ ಸಂಖ್ಯೆ:03, ಅಧ್ಯಕ್ಷರ ಅಪ್ಪಣೆ ಇತರೆ ವಿಷಯಗಳ ಸಂಖ್ಯೆ:01 ಹಾಗೂ ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ರಮಾ ಗುಂಡುರಾವ ಅನ್ನುವ ಅಭ್ಯರ್ಥಿಗೆ ಆಯ್ಕೆ ಮಾಡುವಾಗ ಅನ್ಯಾಯವಾಗಿದೆ ಎಂಬ ಬಗ್ಗೆ ತಮ್ಮ ಆಕ್ಷೇಪಣೆಯನ್ನು ದಿನಾಂಕ:07–10–2016ರಂದು ಇ–ಮೇಲ್ ಮುಖಾಂತರ ವ್ಯಕ್ತಪಡಿಸಿರುತ್ತಾರೆ.

**ನಿರ್ಣಯ:–**

**ಸಭಾಧ್ಯಕ್ಷರು ಡಾ.ಶ್ರೀನಿವಾಸ ಬಳ್ಳಿ ಅವರ ಪ್ರಶ್ನೆಗೆ, ಸಮರ್ಪಕವಾದ ಉತ್ತರವನ್ನು ನೀಡಿದರು.**

**ದಿನಾಂಕ:11–11–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 01*

**ವಿಷಯ:–** ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರಿಗೆ ಹೊರರಾಜ್ಯದಲ್ಲಿ ಸರ್ಕಾರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಆಯಾ ರಾಜ್ಯ ಸರ್ಕಾರಗಳು ವಿದ್ಯಾರ್ಥಿನಿಯರಿಗೆ ಅವರು ವ್ಯಾಸಂಗ ಮಾಡಿರುವ ವಿಶ್ವವಿದ್ಯಾಲಯದಿಂದ ಫಲಿತಾಂಶ ಪ್ರಕಟಿಸಿದ ದಿನಾಂಕ, ವ್ಯಾಸಂಗ ಮಾಡಿದ ಮಾಧ್ಯಮ, ಮೋಡ್ ಆಫ್ ಸ್ಟಡಿ ಸರ್ಟಿಫಿಕೇಟ್ ಸಲುವಾಗಿ ಅರ್ಜಿಗಳು ಬರುತ್ತಿದ್ದು ಈವರೆಗೆ ಈ ಸರ್ಟಿಫಿಕೇಟ್‌ಗಳಿಗೆ ಶುಲ್ಕ ನಿಗದಿಪಡಿಸಿರುವುದಿಲ್ಲ. ಇನ್ನು ಮುಂದೆ ಈ ಎಲ್ಲ ದಾಖಲೆಗಳನ್ನು ವಿದ್ಯಾರ್ಥಿನಿಯರಿಗೆ, ಸಂಬಂಧಿಸಿದ ಇಲಾಖೆಗಳಿಗೆ ದೃಢೀಕೃತ ಪತ್ರ ನೀಡಲು ಪ್ರತಿ ವಿದ್ಯಾರ್ಥಿನಿಗೆ ಪ್ರತಿ ಕೋರ್ಸಿಗೆ ರೂಪಾಯಿ 550/– ಗಳನ್ನು ನಿಗದಿಪಡಿಸುವುದು ಮತ್ತು ನಕಲು (ಡ್ಯೂಪ್ಲಿಕೇಟ್) ಘಟಿಕೋತ್ಸವ ಪ್ರಮಾಣಪತ್ರಕ್ಕೆ 1000/–ರೂಪಾಯಿಗಳು, ನಕಲು(ಡ್ಯೂಪ್ಲಿಕೇಟ್) ರ್‍ಯಾಂಕ್ ಸರ್ಟಫೀಕೇಟ್‌ಗೆ ರೂಪಾಯಿ 250/– ಹಾಗೂ ತುರ್ತು (ತತ್ಕಾಲ್‌ದಡಿ) ತೇರ್ಗಡೆ ಪ್ರಮಾಣಪತ್ರ ನೀಡಲು 250/– ರೂಪಾಯಿ ನಿಗದಿಪಡಿಸಲು ದಿನಾಂಕ:11–11–2016ರಂದು ಜರುಗಿದ ಸಭೆಯಲ್ಲಿ **ಮುಂದೂಡಲಾಯಿತು.** ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:–**

**ಮುಂದೂಡಲಾಯಿತು.**

**<u>ದಿನಾಂಕ:11-11-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ :02*

**ವಿಷಯ:-**ಸ್ನಾತಕೋತ್ತರ ಪದವಿಗಳ ಪ್ರಥಮ ಹಾಗೂ ತೃತೀಯ ಸೆಮಿಸ್ಟರಿನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ಬದಲು ಇತರ ವಿಶ್ವವಿದ್ಯಾಲಯಗಳಲ್ಲಿ ರೂಢಿಯಲ್ಲಿರುವಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಸಹ 2017-18ನೇ ಶೈಕ್ಷಣಿಕ ಸಾಲಿನ ಹಾಗೂ ಮುಂಬರುವ ಶೈಕ್ಷಣಿಕ ವರ್ಷಗಳಿಂದ ಉತ್ತರ ಪತ್ರಿಕೆಗಳನ್ನು ಒಬ್ಬ ಪರೀಕ್ಷಕರಿಂದ ಮಾತ್ರ ಮೌಲ್ಯಮಾಪನ ಮಾಡಿಸುವದು ಹಾಗೂ ಒಂದು ವೇಳೆ ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ ಹೊರಗಿನ ವಿಶ್ವವಿದ್ಯಾಲಯದಿಂದ ಒಬ್ಬ ಮೌಲ್ಯಮಾಪಕರನ್ನು ಕರೆಯಿಸಿ ಏಕಮುಖವಾಗಿ ಮೌಲ್ಯಮಾಪನ ಮಾಡಿಸುವದು ಹಾಗೂ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ರೂಢಿಯನ್ನು ಜಾರಿಗೆ ತರಲು ದಿನಾಂಕ:11-11-2016 ರಂದು ಜರುಗಿದ ಸಭೆಯಲ್ಲಿ **ಮುಂದೂಡಲಾಯಿತು**. ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:-**

**ಮುಂದೂಡಲಾಯಿತು.**

**<u>ದಿನಾಂಕ:11-11-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮುಂದೂಡಿದ ವಿಷಯಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 03*

**ವಿಷಯ:-** ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.

ದಿನಾಂಕ:22-9-2016ರಂದು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಕಟ್ಟಡ ಸಮಿತಿ ಸಭೆಯಲ್ಲಿ ಆರು ವಿಷಯಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು. ದಿನಾಂಕ:11-11-2016ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ **ಕಟ್ಟಡ ಸಮಿತಿ ಸಭೆಯ ನಡವಳಿ ಸಂಖ್ಯೆ:3,4 ಹಾಗೂ 6ನ್ನು ಅನುಮೋದಿಸಲಾಯಿತು. ಹಾಗೂ ಇನ್ನುಳಿದ ನಡವಳಿ ಸಂಖ್ಯೆ:1,2,5 ಮುಂದೂಡಲಾಯಿತು. ಆದ್ದರಿಂದ ಸದರಿ ನಡವಳಿ ಸಂಖ್ಯೆ:1,2,5** ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಪುನ: ಮಂಡಿಸಿದೆ.

**ನಿರ್ಣಯ:-**

**ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ನಡವಳಿಗಳನ್ನು ಅನುಮೋದಿಸಲಾಯಿತು.**

**ನಡವಳಿ ಸಂಖ್ಯೆ:1** Tenders for the architectural consultancy services for new civil works to be taken under RUSA grants.

**ನಡವಳಿ ಸಂಖ್ಯೆ:2** Tenders for up-gradation, renovation of civil works to be taken under RUSA grants.

**ನಡವಳಿ ಸಂಖ್ಯೆ:5** Entrustment of Civil works to KRIDL Vijayapura at "Jnana-Shakti Campus" KSWU Vijayapura.

## ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು

## *ಸಿಂಡಿಕೇಟ್ ಐಟಂ ಸಂಖ್ಯೆ: 04*

**ವಿಷಯ:** 2017-18 ನೇ ಶೈಕ್ಷಣಿಕ ಸಾಲಿಗಾಗಿ ಹೊಸ ಮಹಿಳಾ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆಗೆ, ಸಂಲಗ್ನತೆ ಪರಿಶೀನೆಗಾಗಿ ಸ್ಥಾನಿಕ ವಿಚಾರಣಾ ಸಮಿತಿಗಳನ್ನು(LIC) ರಚಿಸುವ ಕುರಿತು, ಹಾಗೂ ಸದರಿ ಸಮಿತಿಯ ಸದಸ್ಯರುಗಳಿಗೆ ಊಟ, ಕಾಫೀ/ಟಿ, ವಾಹನ ಹಾಗೂ ವಸತಿ ಭತ್ಯೆಯನ್ನು ನೀಡುವ ಕುರಿತು.

1. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧೀನ ಮಹಿಳಾ ಮಹಾವಿದ್ಯಾಲಯಗಳಿಗೆ ಹಾಗೂ ನೊಂದಾಯಿತ ಸಂಘ ಸಂಸ್ಥೆಗಳಿಗೆ 2017-18 ನೇ ಶೈಕ್ಷಣಿಕ ಸಾಲಿಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 59(3), ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ-2014 ರ ಮೇರೆಗೆ ಹೊಸ ಮಹಿಳಾ ಕಾಲೇಜು, ಹೊಸ ಕೋರ್ಸು, ಹೊಸ ವಿಷಯ, ಶಾಶ್ವತ, ಶಾಶ್ವತ ನವೀಕರಣ, ವಿಸ್ತರಣೆ ಮತ್ತು ಮುಂದುವರಿಕೆ ಸಂಲಗ್ನತೆ ಮಂಜೂರಾತಿಗಾಗಿ ಸಂಯೋಜನೆ ಅರ್ಜಿಗಳನ್ನು ಕರೆಯಲಾಗಿದೆ. ಹಲವಾರು ಸಂಘ/ಸಂಸ್ಥೆಗಳಿಂದ ಹಾಗೂ ಸಂಯೋಜಿತ ಕಾಲೇಜುಗಳಿಂದ ಅರ್ಜಿಗಳು ಬರುತ್ತಿದ್ದು ಬಂದ ಅರ್ಜಿಗಳನ್ನು ಸೂಕ್ತ ಶಿಫಾರಸ್ಸಿಗಾಗಿ ಸ್ಥಾನಿಕ ವಿಚಾರಣಾ ಸಮಿತಿಗಳನ್ನು(LIC) ರಚಿಸಬೇಕಾಗಿದೆ. ಕಳೆದ ವರ್ಷ 2016-17 ನೇ ಸಾಲಿನಲ್ಲಿ ಒಟ್ಟು ಸಂಯೋಜಿತ ಕಾಲೇಜುಗಳ ಸಂಖ್ಯೆ-137 ಗಳಿದ್ದು 09 ಸ್ಥಾನಿಕ ವಿಚಾರಣಾ ಸಮಿತಿಗಳನ್ನು ರಚಿಸಲಾಗಿತ್ತು. ಆದ ಕಾರಣ 2017-18 ನೇ ಶೈಕ್ಷಣಿಕ ಸಾಲಿಗೆ ರಾಜ್ಯಾದ್ಯಂತ ಇರುವ 153 ಮಹಿಳಾ ಕಾಲೇಜುಗಳ ಅನುಗುಣವಾಗಿ ಸ್ಥಾನಿಕ ವಿಚಾರಣಾ ಸಮಿತಿಗಳನ್ನು(LIC) ರಚಿಸಬೇಕಾಗುತ್ತದೆ. ಈ ವಿಷಯವನ್ನು ಸಿಂಡಿಕೇಟ ಸಭೆಯ ಅವಗಾಹನೆಗೆ ಮಂಡಿಸಿದೆ.
2. ಸ್ಥಾನಿಕ ವಿಚಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಪ್ರತಿ ಸಲ ವಿಶ್ವವಿದ್ಯಾಲಯದಿಂದ ಕೇವಲ ವಾಹನದ ವ್ಯವಸ್ಥೆಯನ್ನು ಮಾತ್ರ ಒದಗಿಸಲಾಗುತ್ತಿತ್ತು. ಆದರೆ 2017-18 ನೇ ಸಾಲಿನಿಂದ ಸ್ಥಾನಿಕ ವಿಚಾರಣಾ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಊಟ, ಕಾಫಿ/ಟೀ, ವಾಹನ ಹಾಗೂ ವಸತಿ ಸೌಲಭ್ಯವನ್ನು ಸಹ ವಿಶ್ವವಿದ್ಯಾಲಯದಿಂದಲೇ ಒದಗಿಸಲು (ವಸತಿ ವ್ಯವಸ್ಥೆಗೆ ಗರಿಷ್ಟ ರೂ.750/- ಮತ್ತು ದಿನಭತ್ಯೆ 500/-) ಹಾಗೂ ಈ ಎಲ್ಲ ವ್ಯವಸ್ಥೆಯ ನಿರ್ವಾಹಣೆಯನ್ನು ಆಯಾ ಸಮಿತಿಯ ಅಧ್ಯಕ್ಷರುಗಳು ನಿರ್ವಹಿಸಲು ತಿಳಿಸುವಂತೆ, ಅದಕ್ಕಾಗಿ ತಗಲುವ ವೆಚ್ಚವನ್ನು ಸಾಧಿಲ್ವಾರು ವೆಚ್ಚವೆಂದು ಆಯಾ ಅಧ್ಯಕ್ಷರ ಹೆಸರಿನಲ್ಲಿ ಒಂದು ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸುವಂತೆ ಕೋರಿ ಸಲ್ಲಿಸಲಾಗಿದೆ. ಸರಕಾರದ ಆದೇಶ ಸಂಖ್ಯೆ:ಇಡಿ 600 ಯುಆರ್‌ಸಿ 2015, ಬೆಂಗಳೂರು ದಿ:16-01-2016 ರ ಪ್ರಕಾರ ವಿಶ್ವವಿದ್ಯಾಲಯದ ಇಬ್ಬರು ಸಿಂಡಿಕೇಟ್ ಸದಸ್ಯರನ್ನು ವರ್ಷಕ್ಕೊಮ್ಮೆ ಸರದಿ ಪ್ರಕಾರ ಸಮಿತಿಯಲ್ಲಿ ನೇಮಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ.

**ನಿರ್ಣಯ:-**

1. **ಮಹಿಳಾ ಕಾಲೇಜುಗಳ ಸಂಖ್ಯೆಗೆ ಅನುಗುಣವಾಗಿ ಸ್ಥಾನಿಕ ವಿಚಾರಣಾ ಸಮಿತಿಗಳನ್ನು(LIC) ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. ಹಾಗೂ ಸ್ಥಾನಿಕ ವಿಚಾರಣಾ ಸಮಿತಿಯ(LIC) ಅಧ್ಯಕ್ಷರಿಗೆ/ಸದಸ್ಯರುಗಳಿಗೆ ಊಟ, ಕಾಫಿ/ಟೀ, ವಾಹನ ಸೌಲಭ್ಯವನ್ನು ವಿಶ್ವವಿದ್ಯಾಲಯದಿಂದಲೇ ಒದಗಿಸಲು ಹಾಗೂ ಪ್ರತಿ ಸದಸ್ಯರಿಗೆ ದಿನಕ್ಕೆ ರೂ.750/- ವಸತಿಗಾಗಿ ನೀಡುವುದೆಂದು (ರಸೀದಿ ಲಗತ್ತಿಸುವ ಶರತ್ತಿನ ಮೇರೆಗೆ) ನಿರ್ಣಯಿಸಲಾಯಿತು.**
2. **ಸರಕಾರದ ಆದೇಶ ಸಂಖ್ಯೆ:ಇಡಿ 600 ಯುಆರ್‌ಸಿ 2015, ಬೆಂಗಳೂರು ದಿ:16-01-2016 ರ ಪ್ರಕಾರ ಡಾ.ಶ್ರೀನಿವಾಸ ಬಳ್ಳಿ ಮತ್ತು ಶ್ರೀ ರವೀಂದ್ರ ಬಿ ಭಾವಿಕಟ್ಟಿ ಇವರನ್ನು ಸಿಂಡಿಕೇಟ್ ಸದಸ್ಯರಾಗಿ ಸ್ಥಾನಿಕ ವಿಚಾರಣಾ ಸಮಿತಿಯಲ್ಲಿ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.**

**<u>ದಿನಾಂಕ:19–12–2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 05*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಥಿಯರಿ ಪರೀಕ್ಷೆಗಳಿಗೆ ವಿಚಕ್ಷಕದಳಗಳನ್ನು(Squad Team) ನೇಮಿಸಲಾಗಿದ್ದು ದಿನಾಂಕ:27–11–2016 ರಿಂದ ಎರಡು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ತಂಡದ ಸದಸ್ಯರುಗಳಿಗೆ ಈಗಿರುವ ದಿನಭತ್ಯೆ ರೂ.500/– ನೀಡಲಾಗುತ್ತಿದೆ. ಇದು ದೈನಂದಿನ ಖರ್ಚಿಗೆ ಸಾಕಾಗುವುದಿಲ್ಲ. ಹಾಗಾಗಿ ದಿನಭತ್ಯೆಯನ್ನು ಹೆಚ್ಚಿಸಬೇಕೆಂದು ಅಧ್ಯಾಪಕರುಗಳು ಪತ್ರದ ಮೂಲಕ ಮನವಿ ಸಲ್ಲಿಸಿರುತ್ತಾರೆ. ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಈ ವಿಷಯವನ್ನು ಪರಿಷ್ಕೃತ ದರ ನಿಗದಿಪಡಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**

**ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ, ಥಿಯರಿ ಪರೀಕ್ಷೆಗಳ ವಿಚಕ್ಷಕದಳದ(Squad Team) ಸದಸ್ಯರುಗಳಿಗೆ ದಿನಭತ್ಯೆ ರೂ.750/– ನಿಗದಿಪಡಿಸಲಾಯಿತು. ಈ ಆದೇಶವು 1–1–2017ರಿಂದ ಜಾರಿಗೆ ಬರಲಿದೆ ಎಂದು ನಿರ್ಣಯಸಲಾಯಿತು.**

**<u>ದಿನಾಂಕ:19–12–2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 06*

**ವಿಷಯ:** ದಿನಾಂಕ:28–10–2016ರಂದು ಬೆಳಿಗ್ಗೆ 11:30 ಘಂಟೆಗೆ ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿ.

*ನಿರ್ಣಯ:–*

***ಗ್ರಂಥಾಲಯ ಸಲಹಾ ಸಮಿತಿ ಸಭೆಯ ಹದಿನೆಂಟು ನಡವಳಿಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು***

**<u>ದಿನಾಂಕ:19–12–2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು</u>**

## *ಸಿಂಡಿಕೇಟ್ ಐಟಂ ಸಂಖ್ಯೆ: 07*

**ವಿಷಯ:** ಅತಿಥಿ ಗ್ರಂಥಾಲಯ ಸಹಾಯಕರ ನೇಮಕ ಮಾಡುವ ಕುರಿತು.

**ಉಲ್ಲೇಖ:–** ಕರಾಮವಿವಿ/ಗ್ರಂಥಾ/2016–17 ದಿನಾಂಕ:8–12–2016

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸುಮಾರು 2000ಹೊಸ ಪುಸ್ತಕಗಳಿಗೆ Classification and other technical work, Data Entry, ಸುಮಾರು 30,000 ಪುಸ್ತಕಗಳಿಗೆ Labeling, ಸುಮಾರು 80,000 ಪುಸ್ತಕಗಳಿಗೆ Barcode Generation Labeling, shelf Management stock management, circulation work reference section work, SC/ST Book Bank ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಪದವಿ

ಮತ್ತು ತರಬೇತಿ ಪಡೆದವರನ್ನು (MLISc–04) ಮತ್ತು (CLib-03) ಅತಿಥಿ ಗ್ರಂಥಾಲಯ ಸಹಾಯಕರನ್ನಾಗಿ ನೇಮಕಾತಿ ಕುರಿತು.

ನಿರ್ಣಯ:– Classification and other technical work, Data Entry, **Labeling, Barcode Generation Labeling, Shelf Management Stock Management, circulation work reference section work, SC/ST Book-Bank ಮುಂತಾದ ಕಾರ್ಯಗಳನ್ನು ನಿರ್ವಹಿಸಲು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಪದವಿ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳನ್ನು (MLISc–04 ಮತ್ತು CLib-03) ಆರು ತಿಂಗಳ ಅವಧಿಗೆ ಒಂದು ದಿನದ ಬ್ರೇಕ್ ನೀಡಿ ಅತಿಥಿ ಗ್ರಂಥಾಲಯ ಸಹಾಯಕರನ್ನಾಗಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

**ದಿನಾಂಕ:19–12–2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 08*

**ವಿಷಯ:** ದಿನಾಂಕ: 30–11–2016ರಂದು ಬೆಳಿಗ್ಗೆ 11:00 ಘಂಟೆಗೆ ಜರುಗಿದ ಖರೀದಿ ಸಮಿತಿ ಸಭೆಯ ನಡವಳಿಗಳು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿದೆ.

***ನಿರ್ಣಯ:– ಖರೀದಿ ಸಮಿತಿ ಸಭೆಯ ಹನ್ನೊಂದು ನಡವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿ ಅನುಮೋದಿಸಲಾಯಿತು.***

**ದಿನಾಂಕ:19–12–2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 09*

ವಿಷಯ: ಗೃಹರಕ್ಷಕರುಗಳ ಸೇವೆಯನ್ನು ಪಡೆಯುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಮೇ॥.ಸಾಯಿ ಸೆಕ್ಯೂರಿಟಿ ಸರ್ವಿಸಸ್ ವಿಜಯಪುರ ಅವರು ಭದ್ರತಾ ಸಿಬ್ಬಂಧಿಯ ಸೇವೆಯನ್ನು ಒದಗಿಸುತ್ತಾ ಬಂದಿರುತ್ತಾರೆ. ಅವರ ಸೇವೆ ಸರ್ಮಪಕವಾಗಿರುವುದಿಲ್ಲ. ಈ ಭಾರಿ ಭದ್ರತಾ ಸಿಬ್ಬಂದಿಗಳ ಟೆಂಡರ್ ಕರೆಯದಾಗ ಅದರಲ್ಲಿ ಗುತ್ತಿಗೆದಾರರು 0% ಸೇವಾ ಶುಲ್ಕ(service charges) ನಮೂದಿಸಿದ್ದು, Financial Bid ಸಂದರ್ಭದಲ್ಲಿ ದರ ಸಂದಾನ (Negotiation) ಮಾಡುವಾಗ ಗುತ್ತಿಗೆದಾರರು ಭದ್ರತಾ ಸಿಬ್ಬಂದಿಗಳನ್ನು ಕನಿಷ್ಠ ವೇತನವನ್ನು ನೀಡುವುದಕ್ಕೆ ಒಪ್ಪದೆ ಇರುವುದರಿಂದ ದರ ಸಂದಾನ ಪ್ರಕ್ರಿಯೆ ವಿಫಲವಾಗಿದೆ. ಹೀಗಾಗಿ ಪರ್ಯಾಯ ವ್ಯವಸ್ಥೆಯನ್ನು ವಿಶ್ವವಿದ್ಯಾಲಯ ವತಿಯಿಂದ ಮಾಡಬೇಕಾಗಿರುವದು ಅವಶ್ಯಕವಾಗಿರುತ್ತದೆ. ಭದ್ರತಾ ಸೇವೆಯನ್ನು ಪಡೆಯಲು ಈಗಾಗಲೇ The Director General of Police and Commandant General of Homeguards Bangalore ಇವರನ್ನು ಸಂಪರ್ಕಿಸಲಾಗಿರುತ್ತದೆ. ಮುಂದಿನ ಕೆಲವು ದಿನಗಳಲ್ಲಿ ಅವರಿಂದ ಷರತ್ತು/ನಿಯಮಗಳ ಬಂದಲ್ಲಿ ಗೃಹರಕ್ಷಕರುಗಳ ಸೇವೆಯನ್ನು ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:–

**ಶ್ರೀ ಆರ್.ಬಿ.ಭಾವಿಕಟ್ಟಿ ಅವರ ಸೂಚನೆಯಂತೆ ಪ್ರಸ್ತುತ ಕರೆದಿರುವ ಭದ್ರತಾ ಸಿಬ್ಬಂದಿಗಳ ಟೆಂಡರ್ ಅನ್ನು ಹಿಂಪಡೆಯಲು ತೀರ್ಮಾನಿಸಲಾಯಿತು. ಮುಂದಿನ ದಿನಗಳಲ್ಲಿ ಗೃಹರಕ್ಷಕರುಗಳ ಸೇವೆಯನ್ನು** The

Director General of Police and Commandant General of Homeguards Bangalore ಇವರಿಂದ ಪಡೆಯಲು ಅನುಮೋದಿಸಲಾಯಿತು



## *ಸಿಂಡಿಕೇಟ್ ಐಟಂ ಸಂಖ್ಯೆ: 10*

**ವಿಷಯ:** ರೂಸಾ ಅನುದಾನದ ಕಾಮಗಾರಿಗಳಿಗಾಗಿ 14 ದಿನಗಳ ಅಲ್ಪಾವಧಿ ಇ- ಟೆಂಡರ್ ಕರೆಯಲು ಹಾಗೂ ಸಾಮಗ್ರಿಗಳನ್ನು ಇ-ಟೆಂಡರ ಮೂಲಕ ಖರೀದಿಸಲು ಅನುಮತಿ ನೀಡುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ರೂಸಾ ಯೋಜನೆಯಡಿಯಲ್ಲಿ ರೂ.20.00 ಕೋಟಿಗಳ ಅನುದಾನವನ್ನು ಮಂಜೂರಿಸಿದೆ. ಮಾರ್ಚ 2016ರಲ್ಲಿ ರೂ. 9.90 ಕೋಟಿಗಳನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಿರುತ್ತಾರೆ. ಈ ಅನುದಾನದಲ್ಲಿ ಹೊಸ ಕಟ್ಟಡಗಳ ನಿರ್ಮಾಣ, ಹಳೆಯ ಕಟ್ಟಡಗಳ ನವೀಕರಣ, ವಿಭಾಗಗಳಿಗೆ ಲ್ಯಾಬ್ ಸಲಕರಣೆಗಳ ಖರೀದಿ, ಕಂಪ್ಯುಟರ್ ಲ್ಯಾಬ್ ನಿರ್ಮಾಣ, ಕ್ಯಾಂಪಸ್ ಅಭಿವೃದ್ಧಿ ಇತ್ಯಾದಿ ಸಲುವಾಗಿ ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ಅನುಮೋದನೆ ನೀಡಲಾಗಿದೆ.

ದಿನಾಂಕ 6-8-2016ರಂದು ಬೆಂಗಳೂರಿನಲ್ಲಿ ಜರುಗಿದ ರೂಸಾ ಸಭೆಯಲ್ಲಿ, ಬಿಡುಗಡೆಯಾದ ಅನುದಾನದ ಬಳಕೆಯನ್ನು ಶೀಘ್ರದಲ್ಲಿ ಮಾಡಲು ಸೂಚಿಸಿರುವುದರಿಂದ, ನಮ್ಮ ವಿಶ್ವವಿದ್ಯಾಲಯದಲ್ಲಿ ರೂಸಾ ಅನುದಾನದಡಿಯಲ್ಲಿನ ಹಳೆಯ ಕಟ್ಟಡಗಳ ನವೀಕರಣ, ವಿಭಾಗಗಳಿಗೆ ಲ್ಯಾಬ್ ಸಲಕರಣೆಗಳ ಖರೀದಿ, ಕಂಪ್ಯುಟರ್ ಲ್ಯಾಬ್ ನಿರ್ಮಾಣ, ಕ್ಯಾಂಪಸ್ ಅಭಿವೃದ್ಧಿ ಇತ್ಯಾದಿ ಸಲುವಾಗಿ ರೂ.1.00ಲಕ್ಷ ಮೇಲಿರುವ ಎಲ್ಲಾ ಸಲಕರಣೆ ಹಾಗೂ ಸಾಮಗ್ರಿಗಳ ಖರೀದಿಗಾಗಿ ಕೆಲಸ ಕ್ಷಿಪ್ರವಾಗಿ ಜರುಗಿಸಬೇಕಿದ್ದರಿಂದ 14 ದಿನಗಳ ಅಲ್ಪಾವಧಿ ಇ-ಟೆಂಡರ್‌ಗಳನ್ನು ಕರೆಯಲಾಗಿತ್ತು. ರೂಸಾ ಮೇಲ್ವಿಚಾರಣೆ ಸಮಿತಿಯು ಸೂಚಿಸಿದಂತೆ, ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:-***

***ಘಟನೋತ್ತರ ಅನುಮೋದನೆ ನೀಡಲಾಯಿತು. ಹಾಗೂ ರೂಸಾ ಅನುದಾನದಡಿಯಲ್ಲಿನ ಹಳೆಯ ಕಟ್ಟಡಗಳ ನವೀಕರಣ, ವಿಭಾಗಗಳಿಗೆ ಲ್ಯಾಬ್ ಸಲಕರಣೆಗಳ ಖರೀದಿ, ಕಂಪ್ಯುಟರ್ ಲ್ಯಾಬ್ ನಿರ್ಮಾಣ, ಕ್ಯಾಂಪಸ್ ಅಭಿವೃದ್ಧಿ ಇತ್ಯಾದಿ ಸಲುವಾಗಿ ರೂ.1.00ಲಕ್ಷ ಮೇಲಿರುವ ಎಲ್ಲಾ ಸಲಕರಣೆ ಹಾಗೂ ಸಾಮಗ್ರಿಗಳ ಖರೀದಿಗಾಗಿ ಇ-ಪ್ರೊಕ್ಯುರ್‌ಮೇಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಇ-ಟೆಂಡರ್‌ಗಳ ದಾಖಲೆಗಳನ್ನು ಮರು ಪರಿಶೀಲಿಸಲು ಈ ಕೆಳಕಂಡ ಸದಸ್ಯರನೊಳಗೊಂಡ ಸಮಿತಿಯನ್ನು ರಚಿಸಲಾಯಿತು.***

| | | |
|---|---|---|
| ***1. ಕುಲಸಚಿವರು*** | – | ***ಅಧ್ಯಕ್ಷರು*** |
| ***2. ಆರ್ಥಿಕ ಅಧಿಕಾರಿಗಳು*** | – | ***ಸದಸ್ಯರು*** |
| ***3. ಶ್ರೀ.ಆರ್.ಬಿ.ಭಾವಿಕಟ್ಟಿ, ಸಿಂಡಿಕೇಟ್ ಸದಸ್ಯರು*** | – | ***ಸದಸ್ಯರು*** |
| ***4. ಶ್ರೀ.ಆರ್.ಸಿ.ಪಾಟೀಲ, ಸಿಂಡಿಕೇಟ್ ಸದಸ್ಯರು(ವಿಶೇಷ ಆಹ್ವಾನಿತರು)*** | – | ***ಸದಸ್ಯರು*** |
| ***5. ರೂಸಾ ನೋಡಲ್ ಅಧಿಕಾರಿ*** | – | ***ಸದಸ್ಯರು*** |
| ***6. ಸಹಾಯಕ ಕಾರ್ಯನಿರ್ವಹಕ ಅಭಿಯಂತರರು*** | – | ***ಸದಸ್ಯ- ಕಾರ್ಯದರ್ಶಿ*** |

ಸಮಿತಿಯು ವರದಿಯನ್ನು ಅದಷ್ಟು ಬೇಗ ತಯಾರಿಸಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 11*

ವಿಷಯ: ದಿನಾಂಕ:07-12-2016ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ಸುದೀರ್ಘವಾಗಿ ಚರ್ಚಿಸಿದ ನಂತರ ಈ ಕೆಳಕಂಡ ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.**

1. Tenders for the construction of SC/ST Hostel Building
2. Tenders for the construction of new civil works to be taken under RUSA grant.
3. Providing and fixing of aluminum partitions works at new ADM Building "Jnana Shakti" Campus KSWU, Vijayapura.

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 12*

ವಿಷಯ: ತಾಂತ್ರಿಕ ವಿಭಾಗಕ್ಕೆ ನುರಿತ ಇಂಜಿನೀಯರ(ಆರ್ಕಿಟೆಕ್ಟ) ಸಿಬ್ಬಂದಿಯನ್ನು ತೆಗೆದುಕೊಳ್ಳುವ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ನೂತನ ಜ್ಞಾನ ಶಕ್ತಿ ಆವರಣದಲ್ಲಿ ಕಟ್ಟಡ ಕಾಮಗಾರಿಗಳು ಪ್ರಗತಿಯ ಹಂತದಲ್ಲಿದ್ದು, ಹಾಗೂ ಹೊಸದಾಗಿ ರೂಸಾ ಅನುದಾನದಡಿಯಲ್ಲಿ ಪ.ಜಾತಿ/ಪ.ಪಂ ವಿದ್ಯಾರ್ಥಿನಿಯರ ವಸತಿ ನಿಲಯ ಕಟ್ಟಡ ಕಾಮಗಾರಿಗಳು ಬಹಳಷ್ಟು ಸಂಖ್ಯೆಯಲ್ಲಿ ಪ್ರಾರಂಭವಾಗುವ ಹಂತದಲ್ಲಿದ್ದು, ತಾಂತ್ರಿಕ ವಿಭಾಗದ ಕೆಲಸಕ್ಕೆ ನುರಿತ ಇಂಜಿನಿಯರರು(ವಾಸ್ತುಶಿಲ್ಪಿಗಳ) ಅವಶ್ಯಕತೆ ಇರುತ್ತದೆ. ಈ ಹಿಂದೆ ದಿನಾಂಕ:8-8-2016 ರಂದು ಮಧ್ಯಾಹ್ನ 3:30ಗಂಟೆಗೆ ಜರುಗಿದ ಸಂದರ್ಶನದಲ್ಲಿ ಭಾಗಿಯಾಗಿರುವ, ಅರ್ಹ ಇರುವ ಅಭ್ಯರ್ಥಿಗಳಲ್ಲಿ ಓರ್ವ ಇಂಜಿನೀಯರ(ಆರ್ಕಿಟೆಕ್ಟ)ರನ್ನು ತಾತ್ಕಾಲಿಕ ನೆಲೆಯಲ್ಲಿ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ವಾಸ್ತುಶಿಲ್ಪ ತಂತ್ರಜ್ಞಾನದಲ್ಲಿ ಅನುಭವ ಇರುವ ಸಿವಿಲ್ ಎಂಜಿನಿಯರ್ ಅಭ್ಯರ್ಥಿಯನ್ನು ತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು. ಸ್ಥಾನಿಕ ಅಭಿಯಂತರು, ಕರಾಮವಿವಿ ಇವರ ಜೊತೆಗೆ ಚರ್ಚಿಸಿ, ಸೂಕ್ತವಾದ ಅಭ್ಯರ್ಥಿಯನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ತೆಗೆದುಕೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.**

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 13*

**ವಿಷಯ:** BFT ಅಧ್ಯಯನ ಮಂಡಳಿ ಸಭೆಯ ನಡಾವಳಿ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ದಿನಾಂಕ: 28-10-2016 ರಂದು ಜರುಗಿದ BFT ಸ್ನಾತಕ ಅಧ್ಯಯನ ಮಂಡಳಿಯ ಸಭೆಯಲ್ಲಿ ತಯಾರಿಸಿದ ಪರೀಕ್ಷಕರ

ಪಟ್ಟಿ, ಕೆಳಗಿನ ಕ್ರಮನಿಯಮಾವಳಿಗಳು ಹಾಗೂ ನಡವಳಿಗಳು ದಿನಾಂಕ:2-11-2016ರಂದು ಜರುಗಿ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಅನುಮೋದಿಸಲಾಗಿದ್ದು, ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಈ ಕೆಳಕಂಡ ಕ್ರಮನಿಯಮಾವಳಿಗಳನ್ನು ಅನುಮೋದಿಸಲಾಯಿತು.**

1. Regulation Governing the Post Graduation Diploma in Fashion Designing (PGDFD).
2. Regulation Governing the Advance Diploma in Fashion Designing (ADFD).
3. Regulation Governing the Bachelor of Fashion & Apparel Designing (BFAD).

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 14*

ವಿಷಯ: ದಿನಾಂಕ:09-12-2016ರಂದು ಜರುಗಿದ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

***ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು***

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 15*

**ವಿಷಯ:** ಎಸ್ಟೇಟ್ ಅಧಿಕಾರಿಯನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಕಲ್ಲನಗೌಡ ಆರ್ ಬಿರಾದಾರ ಇವರು ನಿವೃತ್ತ ತಹಶೀಲ್ದಾರ ಗ್ರೇಡ್-1 ಇವರನ್ನು ಮಹಿಳಾ ವಿಶ್ವವಿದ್ಯಾಲಯಲ್ಲಿ ಆಡಳಿತದ ಹಿತದೃಷ್ಠಿಯಿಂದ ಎಸ್ಟೇಟ್ ಅಧಿಕಾರಿ ಎಂದು ಗೌರವಧನ ಆಧಾರದ ಮೇಲೆ ಸೇವೆಯನ್ನು ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಠಿಯಿಂದ ಶ್ರೀ ಕಲ್ಲನಗೌಡ ಆರ್ ಬಿರಾದಾರ, ನಿವೃತ್ತ ತಹಶೀಲ್ದಾರ ಗ್ರೇಡ್-1 ಇವರ ಸೇವೆಯನ್ನು ಎಸ್ಟೇಟ್ ಅಧಿಕಾರಿಯಾಗಿ ಗೌರವಧನ ಆಧಾರದ ಮೇಲೆ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 16*

ವಿಷಯ:- ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವಿದ್ಯುನ್ಮಾನ ಅಧ್ಯಯನ ವಿಭಾಗ ಇವರನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಹುದ್ದೆಗೆ ನಿಯೋಜನೆ ಮೇಲೆ ನಿಯುಕ್ತಿಗೊಳಿಸಿದ ಕುರಿತು.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 238 ಯುಜಿವಿ 2016, ದಿ:21-11-2016.
2. ಸೇವೆಯಿಂದ ಬಿಡುಗಡೆ ಮಾಡಿದ ಕಛೇರಿ ಆದೇಶ ಸಂಖ್ಯೆ: ಕರಾಮವಿವಿ/ ಆಡಳಿತ-1/2016- 17/2121, ದಿ: 22-11-2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಸರಕಾರದ ಅಧಿಸೂಚನೆ ಮೇರೆಗೆ, ಹಾಗೂ ಸಿಂಡಿಕೇಟ ಸಭೆಯ ಘಟನೋತ್ತರ ಅನುಮತಿ ಮೇರೆಗೆ ಪ್ರೊ. ಶರಣಪ್ಪ ವಿ. ಹಲಸೆ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ವಿದ್ಯುನ್ಮಾನ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ ಇವರನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಹುದ್ದೆಗೆ ದಿನಾಂಕ: 22-11-2016 ರಂದು ಪೂರ್ವಾಹ್ನ ನಿಯೋಜನೆ ಮೇಲೆ ಸೇವೆಯಿಂದ ಬಿಡುಗಡೆ ಗೊಳಿಸಲಾಗಿದೆ.

ಆದ್ದರಿಂದ ಸದರಿ ವಿಷಯನ್ನು ಸಿಂಡಿಕೇಟ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:-*

***ಘಟನೋತ್ತರ ಅನುಮೋದನೆ ನೀಡಲಾಯಿತು.***

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 17*

**ಸಿಂಡಿಕೇಟ್ ಸದಸ್ಯರಾದ ಮಾನ್ಯ ಆರ್.ಸಿ.ಪಾಟೀಲ ಇವರು ಈ ಕೆಳಕಂಡ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.**

**ವಿಷಯ:** ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಿಳಾ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ/ಸಹ ಪ್ರಾಧ್ಯಾಪಕರುಗಳಿಗೆ Ph.D ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವ ಕುರಿತು.

ಈ ಮೇಲಿನ ವಿಷಯದನ್ವಯ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಯಾದಾಗಿನಿಂದಲೂ ಸರಕಾರಿ/ಅನುದಾನಿತ/ಅನುದಾನರಹಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಪ್ರಾಧ್ಯಾಪಕರು ವಿಶ್ವವಿದ್ಯಾಲಯದ ಪ್ರಗತಿಗೆ ಸೇವೆಸಲ್ಲಿಸುತ್ತಿದ್ದು, ಅವರು **NET/SET/M.Phil** ಪದವಿ ಪಡೆದುಕೊಂಡಿದ್ದರೂ **Ph.D** ಪದವಿಯನ್ನು ಪಡೆಯುವದು ಕಡ್ಡಾಯವೆಂಬಂತೆ **U.G.C** ನಿಯಮವಿದೆ, ಆದರೆ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತ **Ph.D** ಪ್ರವೇಶ ಪಡೆದುಕೊಳ್ಳಲು ಅವಕಾಶಗಳು ಕಡಿಮೆ ಇವೆ. ಈ ಅವಕಾಶಗಳಿಗಾಗಿ ಪ್ರಯತ್ನ ನಡೆಸಿದರು ಮಹಿಳಾ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಎಂಬ ನಿರಸ ಭಾವನೆ ಇದೆ. ಹೀಗಾಗಿ ಪ್ರಾಧ್ಯಾಪಕರು 10 ರಿಂದ 15 ವರ್ಷಗಳ ಕಾಲ ವಿಶ್ವವಿದ್ಯಾಲಯ/ಮಹಾವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣದ ಶೈಕ್ಷಣಿಕ ಪ್ರಗತಿಗೆ ಸೇವೆ ಸಲ್ಲಿಸಿ ಮುಂದೊಂದು ದಿನ ವೃತ್ತಿಯಿಂದ ಹೊರಗುಳಿಯಬೇಕಾದ ಪರಿಸ್ಥಿತಿ ಬರಬಹುದು, ಆದ್ದರಿಂದ ಈಗಾಗಲೇ **Ph.D** ಪದವಿ ಪಡೆದು ಐದು ವರ್ಷ ಪೂರ್ಣಗೊಳಿಸಿದ ಸಹ ಪ್ರಾಧ್ಯಾಪಕರಿಗೆ ಮಾರ್ಗದರ್ಶನದ ಅವಕಾಶ ನಿಡುವ, ಅಲ್ಲದೆ ಉನ್ನತ ಶಿಕ್ಷಣದ ಸಂಶೋದನಾ ಅಧ್ಯಯನಕ್ಕೆ ಮಹಿಳಾ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಸಹಾಯಕ/ಸಹ ಪ್ರಾಧ್ಯಾಪಕರ ಸೇವಾ ಅವಧಿಯನ್ನು ಪರಿಗಣಿಸಿ ಲಿಂಗ ಭೇದವಿಲ್ಲದೆ ಅವಕಾಶ ಕಲ್ಪಿಸಿದಲ್ಲಿ ಉನ್ನತ ಶಿಕ್ಷಣದ ಪ್ರಗತಿಗೆ ಉತ್ತೇಜನ ನೀಡಿದಂತಾಗುತ್ತದೆ. ಅಲ್ಲದೆ ಮಹಾವಿದ್ಯಾಲಯಗಳು ನ್ಯಾಕ್ ಸಮಿತಿಯ ಶ್ರೇಣಿ ಪಡೆಯುವಲ್ಲಿ ಸಹಕಾರ ನೀಡಿದಂತಾಗುತ್ತದೆ ಎಂದು ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-**

**ಸುದೀರ್ಘವಾಗಿ ಚರ್ಚಿಸಿದ ನಂತರ ಈ ವಿಷಯವನ್ನು ಮುಂಬರುವ ವಿದ್ಯಾವಿಷಯಕ ಪರಿಷತ್‌ನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು.**

**ದಿನಾಂಕ:19-12-2016 ರಂದು ಜರುಗಿದ 95ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಾಣಿ ಸಂಖ್ಯೆ: 01*

Sub:- Statute for Creation and Approval of Non-Teaching Posts in the Karnataka State Women's University Vijayapura.

ನಿರ್ಣಯ:-

Statute for Creation and Approval of Non-Teaching Posts in the Karnataka State Women's University Vijayapura ಇದನ್ನು ಅನುಮೋದಿಸಲಾಯಿತು.

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ್ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ